**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>**

**<u>ಆಳಂದ</u>**

ಸಿ.ಸಿ, ನಂಬರ 6556/2024 ಸಿ.ಡಬ್ಲೂ.16 ಪಿ.ಡಬ್ಲೂ.6

| | |
|---|---|
| ಹೆಸರು | ಡಾ. ರಾಜೇಶ್ವರಿ |
| ತಂದೆ/ಗಂಡ | ಡಾ. ಬೀಮ್‌ರಾವ್ |
| ವಯಸ್ಸು | 40 ವರ್ಷ |
| ಉದ್ಯೋಗ | ವೈದ್ಯಾಧಿಕಾರಿಗಳು ಸರ್ಕಾರಿ ಆಸ್ಪತ್ರೆ ಆಳಂದ |
| ವಾಸಸ್ಥಳ | ಆಳಂದ |

ದಿನಾಂಕ 11-06-2026

ಸತ್ಯ ಪ್ರತಿಜ್ಞೆಯ ಮೇರೆಗೆ

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ನಾನು 2019 ರಿಂದ ಇಲ್ಲಿಯರವರೆಗೆ ಆಳಂದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಧಿಕಾರಿ ಅಂತಾ ಕೆಲಸ ಮಾಡುತ್ತಿದ್ದೇನು.

ದಿಃ 12.03.2024 ರಂದು ಚಾಸ-18 ರವರು ಮಃ 1.20 ಗಂಟೆಗೆ ರಸ್ತೆ ಅಪಘಾತದಲ್ಲಿ ಮರಣ ಹೊಂದಿದ ಸಚೀನ ಅವರ ಮೃತ ದೇಹವನ್ನು ಆಸ್ಪತ್ರೇಗೆ ಶವ ಪರೀಕ್ಷೆಗೆ ತೆಗೆದುಕೊಂಡು ಬಂದಿದ್ದು ನಾನು ಸದರಿ ದೇಹವನ್ನು ಪರಿಶೀಲಿಸಲಾಗಿ ತಲೆಯ ಮೇಲೆ ರಕ್ತ ಹೆಪ್ಪು ಗಟ್ಟಿದ ಗಾಯ ಆಗಿದ್ದು ಮತ್ತೆ ಎಡಗೈಯ ಮೊಣಕೈ ಹತ್ತಿರ ಮತ್ತೆ ಬೆರಳುಗಳ ಹತ್ತಿರ ಕತ್ತರಿಸಿದ ಗಾಯ ಕಂಡು ಬಂದಿದ್ದು ಮತ್ತು ಕಿವಿ ಮತ್ತು ಮೂಗಿನಲ್ಲೂ ರಕ್ತಸ್ರಾವವಾಗಿತ್ತು. ತಲೆಯನ್ನು ಬಿಚ್ಚಿ ನೋಡಿದಾಗ ರಕ್ತ ಕ್ಲಾಟ್ ಆಗಿತ್ತು ಸ್ಕಲ್ ಬೊನ್ ಫ್ರಾಕ್ಚರ್ ಆಗಿತ್ತು. ಸದರಿ ವ್ಯಕ್ತಿಯ ಮರಣವು due to Hemeorgic shock and Blood Loss ಮತ್ತು Brain injury ಯಿಂದ ಆಗಿರುತ್ತದೆ ಎಂದು ನಾನು ವರದಿಯನ್ನು ನೀಡಿರುತ್ತೇನೆ.

ಸಾಕ್ಷಿಯು ಮೃತ ಸಚೀನ ಅವರ ಶವ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 6 ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 6(ಎ) ಅಂತಾ ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ.ಎಮ್ ಎಸ್ ಎಚ್ . ವಕೀಲರಿಂದ:</u>

ನಿಪಿ-6ರಲ್ಲಿ ರಸ್ತೆ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ ಎಂದು ನಮೂದು ಇಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಪರಿಹಾರದ ಹಣ ಸಿಗಬೇಕು ಎಂದು ನಾನು ರಸ್ತೆ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ